# St. Claret College

**Roll No:**
**Date:**

**Autonomous, Bengaluru**

**UG END SEMESTER EXAMINATION-DECEMBER 2024**

**BCA/ BSC, I SEMESTER**

**KAS 124, GANAKA – VIJNANA KANNADA**

**TIME: 3 hours.** 2 **MAX.MARKS:80**

**This paper contains 3 printed pages and A to I parts**

**Instructions:**
1. **Verify and ensure that the question paper is completely printed.**
2. **Any discrepancies or questions about the exam paper must be reported to the COE within 1 hour after the examination.**
3. **Students must check the course title and course code before answering the questions.**

## PART-A

**ಇವುಗಳಲ್ಲಿ ಒಂದು ಪದ್ಯಕ್ಕೆ ಭಾವಾರ್ಥ ಬರೆಯಿರಿ.** **1x6=6**

1. ಹಾವಾಡಿಗನು, ಮೂಕೊರತಿಯು ತನ್ನ ಮಗನ ಮದುವೆಗೆ
ಶಕುನವ ನೋಡ ಹೋಗುವಾಗ,
ಇದಿರಲೊಬ್ಬ ಮೂಕೊರತಿಯ ಹಾವಾಡಿಗನ ಕಂಡು
ಶಕುನವ ಹೊಲ್ಲವೆಂದ ಚದುರನ ನೋಡಾ
ತನ್ನ ಸತಿ ಮೂಕೊರತಿ, ತನ್ನ ಕೈಯಲು ಹಾವು
ತನ್ನ ಭಿನ್ನವನರಿಯದೆ
ಅನ್ಯರನೆಂಬ ಕುನ್ನಿಯನೇನೆಂಬೆ ಕೂಡಲ ಸಂಗಮದೇವ

ST. CLARET COLLEGE LIBRARY Bengaluru-13 AUTONOMOUS

2. ಹಿಂದೆ ಮುಂದೇ ಎಂದೇ ಕರ್ನಾಟಕ ಒಂದೇ
ಜಗದೇಳಿಗೆಯಾಗುವುದಿದೆ ಕರ್ನಾಟಕದಿಂದೆ
ಇಲ್ಲಿಯ ಜನ-ಮನ-ಭಾಷೆಯು ಕನ್ನಡವದು ಒಂದೇ
ಒಂದೇ ಜನವೂ ಒಂದೇ ಮನವೂ ಕನ್ನಡಿಗರು ಎಂದೇ
ಕುಲವೊಂದೇ ಸ್ಥಲವೊಂದೇ ನೀತಿಯ ನೆಲೆಯೊಂದೇ
ಹೀಗೆನ್ನದ ಹೆರವರು ಅವರಿದ್ದರು ಒಂದೇ
ಇರದಿದ್ದರೂ ಒಂದೇ!

## PART-B

**ಇವುಗಳಲ್ಲಿ ಎರಡಕ್ಕೆ ಟಿಪ್ಪಣಿ ಬರೆಯಿರಿ.** **2x2=4**

3. ದ. ರಾ. ಬೇಂದ್ರೆ
4. ಅಕ್ಕಮಹಾದೇವಿ
5. ಅಲ್ಲಮ ಪ್ರಭು
6. ಕುವೆಂಪು

## PART-C

**ಈ ಕೆಳಗಿನ ನಾಲ್ಕು ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ:** **4x5=20**

7. ತ್ರಿಭಾಷಾ ಸೂತ್ರದಿಂದ ಪಾರಾಗಲು ಕುವೆಂಪು ಅವರು ತೋರಿದ ಮಾರ್ಗಗಳಾವುದು?
8. ಏಳುತಲೇ ಜನಪದರು ಯಾರ್‍ಯಾರನ್ನು ನೆನೆಯುತ್ತಾರೆ. ನೆನೆಯಲು ಕಾರಣವೇನು?
9. ಕಾಳಿಂಗಯ್ಯನ ಪಾತ್ರವನ್ನು ಪರಿಚಯಿಸಿ.
10. ಭಾರತದಲ್ಲಿ ಶಿಕ್ಷಣ ಪದ್ಧತಿ ಪ್ರಾರಂಭವಾದ ಬಗೆಯನ್ನು ವಿವರಿಸಿ.
11. ಸಾಮಾಜಿಕ ಬದಲಾವಣೆಗೆ ವಿಜ್ಞಾನ ಸಾಹಿತ್ಯದ ಕೊಡುಗೆಗಳೇನು? ವಿವರಿಸಿ.
12. ಫೇಸ್ ಬುಕ್ ಹಾಗೂ ಬ್ಲಾಗ್ ಬಗೆಗೆ ಟಿಪ್ಪಣಿ ಬರೆಯಿರಿ.

## PART-D

**ಇವುಗಳಲ್ಲಿ ಮೂರು ಪ್ರಶ್ನೆಗೆ ವಿವರಣಾತ್ಮಕವಾಗಿ ಉತ್ತರಿಸಿ :** **3x10=30**

13. ವೈಚಾರಿಕ ಪ್ರಜ್ಞೆಗೆ ಇರುವ ಅಡೆತಡೆಗಳಾವುವು? ವಿವರಿಸಿ.
14. ಬಸವಣ್ಣನವರ ವಚನಗಳಲ್ಲಿ ಮೌಢ್ಯ ವಿರೋಧಿ ಅಂಶಗಳು ಹೇಗೆ ಮೂಡಿಬಂದಿವೆ
15. ಪಾಹಂನ ಬದುಕಿನ ದುರಂತಕ್ಕೆ ಕಾರಣ ವಿಧಿಯಾಟವೇ ಅಥವಾ ಅವನ ದುರಾಸೆಯೇ? ಚರ್ಚಿಸಿ
16. "ನುಡಿ ಬಿಟ್ಟರೆ ನಾಡು ಬಿಟ್ಟಂತೆ ಭಾಷೆಗೇಡಿ ದೇಶಗೇಡಿಯೂ ಆಗುತ್ತಾನೆ"– ಹೇಗೆ ವಿವರಿಸಿ
17. ಕಂಪ್ಯೂಟರ್ ಬಳಕೆಯಲ್ಲಿ ಕನ್ನಡ ಹೇಗೆ ಒಳಗೊಳ್ಳುತ್ತದೆ?

## PART-E

**18. ಕೆಳಗಿನ ಪಠ್ಯವನ್ನು ಮೂರನೇ ಒಂದು ಭಾಗಕ್ಕೆ ಸಂಕ್ಷೇಪಿಸಿ, ಸೂಕ್ತ ಶೀರ್ಷಿಕೆ ಬರೆಯಿರಿ. 1x5=5**

ತರಬೇತಿ ಕಾರ್ಯಕ್ರಮಗಳನ್ನು ನಡೆಸುವ ವೆಚ್ಚದಲ್ಲಿ ಹೆಚ್ಚಳವಾಗಿರುವುದರಿಂದ ಇಲಾಖೆಯ ಹಣವು ಇವುಗಳಿಗೆ ಸಾಕಾಗುತ್ತಿಲ್ಲ. ಕಾರ್ಯಕ್ರಮಗಳಿಗೆ ಹೆಚ್ಚು ಸದಸ್ಯರು ಭಾಗವಹಿಸುವುದರಿಂದ ಒಂದು ದಿನದ ಅರಿವು ಮೂಡಿಸುವ ಕಾರ್ಯಕ್ರಮವು ಉಪಯೋಗವಿಲ್ಲ ಎಂಬ ಸಾಮಾನ್ಯ ಅಭಿಪ್ರಾಯವಿದೆ. ಇದು ಮೇಳದಂತಿದ್ದು ಪರಿಣಾಮಕಾರಿ ಆಂತರಿಕ ಚರ್ಚೆಗೆ ಅಸ್ಪದವಿರುವುದಿಲ್ಲ. ಸದಸ್ಯರ ಬೇಡಿಕೆಗೆ ಅನುಗುಣವಾಗಿ, ಚಟುಚಟಿಕೆಯ ಪ್ರಕಾರ ಮತ್ತು ಭೌಗೋಳಿಕವಾಗಿ ಬೇಕಾಗಿರುವ ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮಗಳನ್ನು 25 ರಿಂದ 30 ಸದಸ್ಯರನ್ನು ಮಾತ್ರ ಸೇರಿಸಿ ಹೆಚ್ಚಿನ ಅವಧಿಯಲ್ಲಿತರಬೇತಿ ನೀಡಬೇಕು. ಒಕ್ಕೂಟದ ಕಾರ್ಯಕಾರಿ ಸದಸ್ಯರಿಗೆ ನಾಯಕತ್ವ ಅಭಿವೃದ್ಧಿ, ಹಣಕಾಸಿನ ನಿರ್ವಹಣೆ ಮುಂತಾದವುಗಳ ಬಗ್ಗೆ ಪ್ರತ್ಯೇಕ ತರಬೇತಿ ಕಾರ್ಯಕ್ರಮಗಳನ್ನು ನಡೆಸಬೇಕು. ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಒಕ್ಕೂಟಗಳಿಗೆ ಭೇಟಿ ನೀಡುವಂತಹ ಕಾರ್ಯ–ಕ್ರಮಗಳನ್ನು ಸಂಘಟಿಸಿಸಬೇಕು. ಹಣದ ನಿರ್ವಹಣೆಯ ಬಗ್ಗೆ ಸೂಕ್ತವಾದ ಮಾರ್ಗಸೂಚಿಗಳನ್ನು ಇಲಾಖೆಯು ನೀಡಬೇಕು.

## PART-F

**19. ನಿಮ್ಮ ಅಂಕಪಟ್ಟಿಯಲ್ಲಿನ ಹೆಸರಿನ ದೋಷವನ್ನು ಸರಿಪಡಿಸುವ ಕುರಿತು ವಿಶ್ವವಿದ್ಯಾಲಯದ ಕುಲಸಚಿವರಿಗೆ ಅರ್ಜಿ ಬರೆಯಿರಿ.** **1x4=4**

## PART-G

**ನಾಲ್ಕು ಪದಗಳಿಗೆ ಅರ್ಥ ಬರೆಯಿರಿ.** **1x4=4**

20. ಸರಕು
21. ಕೆಳಯ
22. ಅಸ್ತಿತ್ವ
23. ದತ್ತಾಂಶ
24. ಬೆರಗು

## PART-H

**ಎರಡು ಪದಗಳಿಗೆ ಸ್ವಂತ ವಾಕ್ಯ ಬರೆಯಿರಿ.** **1x2=2**

25. ಇಂಗು
26. ಜಾಣ್ಮೆ
27 ಕಡಲು
28. ಅಜ್ಞಾತ

## PART-I

**ಇವುಗಳಲ್ಲಿ ಒಂದೊಂದು ಸರಿಯಾದ ಉತ್ತರವನ್ನು ಆರಿಸಿ ಸರಿ ಉತ್ತರ ಬರೆಯಿರಿ.** **1x5=5**

**29. ಒಂದೇ ಕರ್ನಾಟಕ ಕವಿತೆಯನ್ನು ಬರೆದವರು ಯಾರು?**

ಅ) ಬೇಂದ್ರೆ ಇ) ಅನಕೃ
ಆ) ಅಶ್ವಥ್ಥಾಮನ್ ಈ) ಮಾಸ್ತಿ

**30. ಅಕ್ಕಮಹಾದೇವಿಯ ವಚನಾಂಕಿತ**

ಅ) ಚೆನ್ನಮಲ್ಲಿಕಾರ್ಜುನ ಇ) ಕೂಡಲಸಂಗಮದೇವ
ಆ) ಗುಹೇಶ್ವರ ಈ) ನಾಸ್ತಿನಾಥ

**31. ಕರ್ನಾಟಕ ರಾಜ್ಯೋದಯ ಗೀತೆ ಬರೆದವರು ಯಾರು?**

ಅ) ಅಡಿಗ ಇ) ಬರಗೂರು ರಾಮಚಂದ್ರಪ್ಪ
ಆ) ಕುವೆಂಪು ಈ) ಲಂಕೇಶ್

**32. ನಾಲ್ಕು ಮೊಳ ಭೂಮಿ ಕತೆಯ ಲೇಖಕರು ಯಾರು?**

ಅ) ಚದುರಂಗ ಇ) ಶಿವರುದ್ರಪ್ಪ
ಆ) ಕೆ. ಎಸ್. ನಿಸಾರ್ ಅಹಮದ್ ಈ) ತ್ರಿವೇಣಿ

**33. ಹೆಚ್. ನರಸಿಂಹಯ್ಯನವರ ಕೃತಿ**

ಅ) ವೈಜ್ಞಾನಿಕ ಸಂಶೋಧನೆ ಇ) ವೈಚಾರಿಕ ಪ್ರಜ್ಞೆಗೆ ಅಡೆತಡೆಗಳು
ಆ) ನಾನು ಅವನಲ್ಲ ಅವಳು ಈ) ಪಿರಿಯಾ ಪಟ್ಟಣ ಕಾಳಗ

****